ನಿಮ್ಮ ಶೋಧ ಕೆಲಸ ಮುಗಿದ ನಂತರ ನನ್ನ ಛೇಂಬರಿಗೆ ಬನ್ನಿ...' ಎಂದು ಹೇಳಿ ಅಲ್ಲಿಂದ ಹೊರಟು ಹೋದರು.

ಮ್ಯೂಸಿಯಂನೊಳಗೆ ಕಾಲಿಡುತ್ತಿದ್ದ ಹಾಗೆಯೇ ಅಲ್ಲಿ ಹೊಸದಾಗಿ ಬಣ್ಣ ಬಳಿದುದ್ದರಿಂದ ಬಣ್ಣದ ವಾಸನೆ ಜೋರಾಗಿತ್ತು. ಗಾಜಿನ ದೊಡ್ಡ ದೊಡ್ಡ 'ಜಾರ್'ಗಳಲ್ಲಿ ತುಂಬಿದ್ದ ಫಾರ್ಮಾಲಿನ್ ದ್ರಾವಣದಲ್ಲಿ ಮಾನವ ದೇಹದ ವಿವಿಧ ಅಂಗಗಳ ಭಾಗಗಳನ್ನು ಇಟ್ಟಿದ್ದರು. ಗೋಡೆಗೆ ಆತುಕೊಂಡಂತಿದ್ದ ದೊಡ್ಡ ಮರದ ಬೀರುಗಳಲ್ಲಿ ಮೂರು ಅಸ್ಥಿಪಂಜರಗಳು ನೇತಾಡುತ್ತಿದ್ದವು.

'ಈಗ ಯಾಕೆ ಪೇಯಿಂಟ್ ಮಾಡಿಸಿದ್ದಾರೆ?' ಕುಲಕರ್ಣಿ ಕೇಳಿದರು.

'ಆಗಾಗ್ಗೆ ಹೀಗೆ ಮಾಡಿಸುತ್ತಾರೆ ಸರ್, ಇದರಿಂದ ಸ್ಕೆಲೆಟನ್‌ಗೆ ಕ್ರಿಮಿಗಳ ಹಾವಳಿ ತಪ್ಪುತ್ತದೆ' ಎಂದರು ಹಿಂಬಾಲಿಸಿ ಬಂದಿದ್ದ ಲೆಕ್ಚರರ್.

'ಓ ಹಾಗಾ?' ಎನ್ನುತ್ತಾ, ಸುಮಾರು ಐವತ್ತಕ್ಕೂ ಹೆಚ್ಚಿದ್ದ ಜಾರ್‌ಗಳನ್ನು ನೋಡಿ, 'ಈ ಬಾಡಿ ಪಾರ್ಟ್ಸ್‌ಗಳನ್ನು ಎಲ್ಲಿಂದ ತರುತ್ತೀರಿ?' ಎಂದು ಕೇಳಿದರು.

'ಸರ್ಜರಿ ಡಿಪಾರ್ಟ್‌ಮೆಂಟಿನಿಂದ, ಸರ್ಜರಿ ಮಾಡಿ ಹೊರ ತೆಗೆದ ಪಾರ್ಟುಗಳು ಸರ್ ಇವು. ಇವುಗಳಿಂದಾನೆ ನಾವು ಕಲಿಯುತ್ತೇವೆ. ಕಡಿಮೆ ಬಿದ್ದರೆ ಬೇರೆ ಮೆಡಿಕಲ್ ಕಾಲೇಜಿನಿಂದ ತರಿಸಿಕೊಳ್ಳುತ್ತಾರೆ. ಆದರೆ ನಮ್ಮ ಕಾಲೇಜಿನಲ್ಲೇ ಎಲ್ಲಾ ಇವೆ...' ಎಂದರು ಲೆಕ್ಚರರ್.

ಕುಲಕರ್ಣಿಯವರು ಎಲ್ಲಾ ನೋಡಿಕೊಂಡು ಬರುವಾಗ, ಅಸ್ಥಿಪಂಜರಗಳನ್ನು ಗಮನಿಸುತ್ತ, ಆ ಬೀರುಗಳನ್ನು ಅಲ್ಲಾಡಿಸಿ ನೋಡಿತ್ತಾ ಬಂದರು. ಅಷ್ಟರಲ್ಲಿ ಬೀರುವಿನ ಹಿಂದಿನಿಂದ ಏನೋ ವಸ್ತುವೊಂದು ಬಿದ್ದಂತಾಗಿ ಕೆಳಗೆ, ಹಿಂದೆ ಎಲ್ಲಾ ಕಡೆ ಬಗ್ಗಿ ನೋಡಿ, 'ರೀ... ಅದೇನೂಂತ ನೋಡಿ, ತೆಗೆಯಿರಿ' ಎಂದರು. ಅವರು ಕೈಹಾಕಿ ಬೀರುವಿನ ಕೆಳಗಿನಿಂದ ಒಡೆದು ಚೂರಾಗಿದ್ದ ಒಂದು ಮೊಬೈಲ್ ಫೋನನ್ನು ಹೊರ ತೆಗೆದು ಕುಲಕರ್ಣಿಯವರ ಕೈಗಿಟ್ಟು, 'ಇದು ಮೊಬೈಲ್ ಫೋನಿನ ಚೂರುಗಳು ಸರ್, ಇದು ಅದರ ಬ್ಯಾಟರಿ... ಬೇರೆಯಾಗಿ ಬಿದ್ದಿತ್ತು. ಒಂದು ಭಾಗ ಚೂರು ಚೂರಾಗಿದೆ. ಸಿಮ್ ಕಾರ್ಡ್ ಇರುವ ಭಾಗ ಇದು. ಸದ್ಯ ಒಡೆದಿಲ್ಲ...' ಎಂದರು ಅವರ ಜೊತೆ ಬಂದಿದ್ದ ಕಾನ್‌ಸ್ಟೆಬಲ್‌ಗಳು.

ಆಶ್ಚರ್ಯದಿಂದ ಲೆಕ್ಚರರ್, 'ಇದು ಯಾರದ್ದು? ಹಿಂದೆ ಹೇಗೆ ಸಿಕ್ಕಿ ಹಾಕಿಕೊಂಡಿತ್ತು' ಎಂದರು.

'ಎಲ್ಲವನ್ನು ಕವರಿಗೆ ಹಾಕಿಕೊಳ್ಳಿ, ಗ್ಲೌಸ್ ಹಾಕಿ ಕೊಂಡಿಲ್ಲ ಯಾಕೆ?' ಎಂದು ಸಿಬ್ಬಂದಿಗೆ ಗದರಿಸಿ, 'ಗೋಡೆ ಹಾಗೂ ಬೀರುವಿನ ಮಧ್ಯೆ ಸ್ವಲ್ಪ ಜಾಗವಿತ್ತಲ್ಲ, ಅದಕ್ಕೊ ಅಥವಾ ಬೀಸಿ ಎಸೆದ ರಭಸಕ್ಕೊ ಏನೋ ಅಲ್ಲಿಯೇ ಸಿಕ್ಕಿಕೊಂಡಿದೆ. ಇರಲಿ ಬಿಡಿ. ಯಾರದ್ದೆಂದು ನಾವು ನೋಡುತ್ತೇವೆ' ಎಂದರು ಕುಲಕರ್ಣಿಯವರು.

'ಥ್ಯಾಂಕ್ಸ್... ನಮಗೆ ಸಹಕಾರ ನೀಡಿದ್ದಕ್ಕೆ... ನಾವಿನ್ನು ಇಲ್ಲಿಂದ ಹೋಗೋಣವಾ?' ಎಂದರು.

ಎಲ್ಲರೂ ಅಲ್ಲಿಂದ ಹೊರಟು ಪ್ರೊಫೆಸರ್ ಛೇಂಬರ್‌ಗೆ ಬಂದರು.

'ಏನಾದ್ರೂ ಸುಳಿವು ಸಿಕ್ಕಿತಾ?' ಪ್ರೊಫೆಸರ್ ಕೇಳಿದರು.

'ಅಂಥಾದ್ದೇನೂ ಸಿಕ್ಕಿಲ್ಲ. ಆದರೆ ಮತ್ತೊಂದು ಬಾರಿ ಬರಬೇಕಾಗುತ್ತೆ...' ಎಂದರು ಕುಲಕರ್ಣಿ.

'ಯಾಕೆ?'– ಉದ್ವೇಗದಿಂದ ಕೇಳಿದ ಪ್ರೊಫೆಸರ್, 'ಮತ್ತೆ ಮತ್ತೆ ನೀವು ವಿಚಾರಣೆಗೆ ಬಂದರೆ... ನನ್ನ ಹೆಸರು ಹಾಳಾಗುತ್ತದೆ. ಅಷ್ಟಕ್ಕೂ ಆ ಹುಡುಗಿ ಈ ಡಿಪಾರ್ಟ್‌ಮೆಂಟಿಗೆ ಸೇರಿದವಳಲ್ಲ...' ಎಂದು ಅಸಹನೆಯಿಂದ ಹೇಳಿದರು.

'ನಾನು ಎಲ್ಲಾ ವರದಿಗಳನ್ನು ನೋಡಿದ ನಂತರ ಮತ್ತೆ ಬಂದರೂ ಬರಬಹುದು. ನೀವ್ಯಾಕೆ ಸಹನೆ ಕಳೆದುಕೊಳ್ತಾ ಇದ್ದೀರಿ? ಒಂದು ಹುಡುಗಿಯ ನಾಪತ್ತೆ ಕೇಸು ಸರ್. ಅವಳು ಬದುಕಿದ್ದಾಳೋ